ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ಹುಮನಾಬಾದ.

ಸಿ.ಸಿ ನಂ.671/2021
ಸಿ.ಡಬ್ಲ್ಯೂ11 ಪಿ.ಡಬ್ಲ್ಯೂ6

| | | |
|---|---|---|
| ಹೆಸರು | : | ಬಾಬುಮಿಯಾ ತಂದೆ ಪತ್ರುಪಟೇಲ |
| ವಯಸ್ಸು | : | 46- ವರ್ಷ |
| ಉದ್ಯೋಗ | : | ಚಾಲಕ |
| ವಾಸ | : | ಸೋನಕೇರಾ. |

ದಿನಾಂಕ: 27-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ:

ನನಗೆ ಚಾಸಾ.1, 10 ಹಾಗೂ 14 ರವರ ಪರಿಚಯ ಇರುವುದಿಲ್ಲ.

ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಗೊತ್ತಿರುವುದಿಲ್ಲ. ಈ ಪ್ರಕರಣದ ಜಪ್ತಿಯಾದ ಪಡಿತರ ಅಕ್ಕಿಯನ್ನು ಸಗಟು ಮಳಿಗೆಯಿಂದ ಖಾಲಿ ಮಾಡಿ ಪುನ: ಲಾರಿಯನ್ನು ಪೋಲಿಸ್ ಠಾಣೆಗೆ ಬಂದು ವಾಹನವನ್ನು ಬಿಟ್ಟಿರುತ್ತೇನೆ. ಈ ಕುರಿತು ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ, ಆಲಿಸಿ ಅನುಮತಿಯನ್ನು ನೀಡಲಾಯಿತು.)**

ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದಃ

ದಿನಾಂಕ: 07.03.2020 ರಂದು ಬೆಳಿಗ್ಗೆ 12.15 ಗಂಟೆ ಸುಮಾರಿಗೆ ಚಾಸಾ.14 ರವರು ತಿಳಿಸಿದ್ದೇನೆಂದರೆ ಠಾಣೆಯಲ್ಲಿದ್ದ ಒಂದು ವಾಹನ ಸಂ.ಕೆಎ 06/ಡಿ0607 ನೇದ್ದರಲ್ಲಿದ್ದ ಮಾಲನ್ನು ಚಾಸಾ.10 ರವರೊಂದಿಗೆ ಹೋಗಿ ಸಗಟು ಮಳಿಗೆಯಲ್ಲಿ ಖಾಲಿ ಮಾಡಿ ಬರುವಂತೆ ಸೂಚಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಹಾಗೂ ಚಾಸಾ.10 ರವರು ಸದರಿ ವಾಹನದಲ್ಲಿದ್ದ ಮಾಲನ್ನು ಹುಮನಾಬಾದ ಸಗಟು ಮಳಿಗೆಗೆ ಹೋಗಿ ಮಧ್ಯಾಹ್ನ 1.00 ಗಂಟೆಗೆ ಖಾಲಿ ಮಾಡಿ ನಂತರ ಮಧ್ಯಾಹ್ನ 2.00 ಗಂಟೆಗೆ ಮರಳಿ ಠಾಣೆಗೆ ಬಂದು ವಾಹನವನ್ನು ಠಾಣೆಯಲ್ಲಿ ನಿಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಕುರಿತು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳೀಕೆಯನ್ನು ನಿಪಿ.5 ಎಂದು ಗುರುತಿಸಲಾಯಿತು.

**ಮರು ವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ. ಸರಿ ಇದೆ.

ಪ್ರಧಾನ ಜೆಎಂಎಫ್ ಸಿ ನ್ಯಾಯಾಧೀಶರು
ಹುಮನಾಬಾದ.